# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1309 |
| ಸದಸ್ಯರ ಹೆಸರು | : | ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 17.12.2025 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಕರಾವಳಿ ಭಾಗದಲ್ಲಿ ತಮಿಳುನಾಡಿನ ಈರೋಡ್ ತಳಿಗಳನ್ನು ತಂದು ಹೈನುಗಾರಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈರೋಡ್ ತಳಿಯ ದನಗಳು ಕರಾವಳಿ ವಾತಾವರಣಕ್ಕೆ ಹೊಂದಿಕೊಳ್ಳುತ್ತವೆಯೇ; ಈ ಬಗ್ಗೆ ಇಲಾಖೆಯು ಅಧ್ಯಯನ ಮಾಡಿದೆಯೇ; | ಬಂದಿದೆ.<br><br>ಈರೋಡ್ ಪ್ರದೇಶದ ವಾತಾವರಣದ ಉಷ್ಣಾಂಶವು ದಕ್ಷಿಣ ಕನ್ನಡ/ಉಡುಪಿ ಜಿಲ್ಲೆಗಳ ವಾತಾವರಣದ ಉಷ್ಣಾಂಶಕ್ಕೆ ಬಹುತೇಕ ಸರಿ ಸಮನಾಗಿರುವುದರಿಂದ ಈರೋಡ್‌ನ ರಾಸುಗಳು ಇಲ್ಲಿನ ವಾತಾವರಣದ ಉಷ್ಣಾಂಶಕ್ಕೆ ಹೊಂದಿಕೊಳ್ಳುವ ಸಾಧ್ಯತೆ ಹೆಚ್ಚು ಇರುವುದರಿಂದ ಹೈನುಗಾರರು ಈರೋಡ್ ಮತ್ತು ಇತರೆ ಜಿಲ್ಲೆಗಳಿಂದ ಉತ್ಕೃಷ್ಟ ತಳಿಯ ರಾಸುಗಳನ್ನು ಖರೀದಿಸಿದ್ದು, ಕರಾವಳಿಯ ವಾತಾವರಣಕ್ಕೆ ಹೊಂದಿಕೊಂಡಿರುತ್ತವೆ.<br><br>ಈರೋಡ್ ಪ್ರದೇಶದ ದನಗಳು ಕರಾವಳಿಯ ವಾತಾವರಣಕ್ಕೆ ಹೊಂದಿಕೊಳ್ಳುವ ಬಗ್ಗೆ ಪಶುಪಾಲನಾ ಇಲಾಖೆ ವತಿಯಿಂದ ಯಾವುದೇ ಅಧ್ಯಯನ ಮಾಡಲಾಗಿರುವುದಿಲ್ಲ. |
| ಆ) | ಈರೋಡ್ ತಳಿಯ ವಿಶೇಷತೆಯೇನು; ಈ ತಳಿ ಸಾಕಾಣಿಕೆಯಿಂದ ಹೈನುಗಾರಿಕೆ ಹೆಚ್ಚು ಲಾಭದಾಯಕವೇ; ಈ ದನಗಳು ದಿನಕ್ಕೆ ಎಷ್ಟು ಲೀಟರ್ ಹಾಲನ್ನು ಒದಗಿಸುತ್ತವೆ; ಈ ತಳಿಯ ಒಂದು ಹಸುವನ್ನು ಸಾಕಲು ದಿನಕ್ಕೆ ಎಷ್ಟು ವೆಚ್ಚ ಮಾಡಬೇಕಾಗುವುದು; | ಈರೋಡ್ ತಳಿ ಎಂಬ ಪ್ರತ್ಯೇಕವಾದ ತಳಿ ಇರುವುದಿಲ್ಲ.<br><br>ಈರೋಡ್ ನಲ್ಲಿ ಪ್ರತಿ ಗುರುವಾರ ನಡೆಯುವ ಜಾನುವಾರು ಸಂತೆಯಲ್ಲಿ ಜರ್ಸಿ, ಹೆಚ್.ಎಫ್. ತಳಿಗಳ ರಾಸುಗಳು ಮತ್ತು ಎಮ್ಮೆಗಳು ಲಭ್ಯವಿದ್ದು, ಸದರಿ ತಳಿಯ ದನಗಳು ದೊಡ್ಡ ಸಂಖ್ಯೆಯಲ್ಲಿ ಒಂದೆಡೆ ಲಭ್ಯವಿರುವುದರಿಂದ ರೈತರಿಗೆ/ಹೈನುಗಾರರಿಗೆ ಬೇಕಾದ ತಳಿಗಳ ರಾಸು/ದನಗಳನ್ನು ಆಯ್ಕೆ ಮಾಡಿಕೊಳ್ಳಲು ಹೆಚ್ಚು ಅವಕಾಶವಿರುತ್ತದೆ. |

| | | |
|---|---|---|
| | | ಪ್ರತಿ ರಾಸುವಿನ ಹಾಲಿನ ಇಳುವರಿ ದಿನಕ್ಕೆ 12 ರಿಂದ 25 ಲೀಟರ್ ಇರುತ್ತದೆ. ಹೆಚ್ಚಿನ ಹಸುಗಳು ಮೊದಲನೇಯ ಅಥವಾ ಎರಡನೇಯ ಸೂಲಿನ ಹಸುಗಳಾಗಿದ್ದು, ರೈತರು ಉತ್ತಮ ಸಾಕಾಣಿಕೆಯನ್ನು ಮಾಡಿದಲ್ಲಿ ದೀರ್ಘ ಕಾಲದವರೆಗೆ ಈ ಹಸುಗಳನ್ನು ಸಾಕಿ ಹೈನುಗಾರಿಕೆಯನ್ನು ನಡೆಸಬಹುದಾಗಿರುತ್ತದೆ.<br><br>15 ಲೀಟರ್ ಹಾಲು ನೀಡುವ ರಾಸುವಿಗೆ ದಿನಕ್ಕೆ ಅಂದಾಜು ರೂ.350-375ರವರೆಗೆ ವೆಚ್ಚ ತಗುಲಬಹುದಾಗಿದೆ. |
| ಇ) | ಈರೋಡ್‌ನಿಂದ ದನಗಳನ್ನು ಸಾಗಣೆ ಮಾಡಲು ದಕ್ಷಿಣ ಕನ್ನಡ ಹಾಲು ಒಕ್ಕೂಟದಿಂದ ಸಹಾಯ ನೀಡಲಾಗುತ್ತಿದೆಯೇ: ನೀಡಿದ್ದರೆ ಒಂದು ಹಸುವಿಗೆ ಸಾಗಣೆ ಮಾಡಲು ಎಷ್ಟು ಸಹಾಯ ನೀಡಲಾಗುತ್ತಿದೆ. ಈವರೆಗೆ ದಕ್ಷಿಣ ಕನ್ನಡ ಜಿಲ್ಲೆಗೆ ಈರೋಡ್‌ನಿಂದ ಎಷ್ಟು ದನಗಳನ್ನು ತರಲಾಗಿದೆ: ಎಷ್ಟು ಸಹಾಯಧನ ನೀಡಲಾಗಿದೆ: (ವಿವರ ನೀಡುವುದು) | ಹೌದು<br><br>ಈರೋಡ್ ಮತ್ತು ಇತರೆ ಜಿಲ್ಲೆಗಳಿಂದ ಖರೀದಿಸಿದ ಪ್ರತಿ ರಾಸುಗಳಿಗೆ ದಕ್ಷಿಣ ಕನ್ನಡ ಹಾಲು ಒಕ್ಕೂಟದಿಂದ ತಲಾ ರೂ.5000/-ಗಳ ಸಾಗಾಣಿಕಾ ವೆಚ್ಚವನ್ನು ನೀಡಲಾಗುತ್ತಿದೆ. ಅಲ್ಲದೇ, ರಾಸುವಿನ ವಿಮಾ ಪ್ರೀಮಿಯಂ ಮೊತ್ತವನ್ನು ಸಂಪೂರ್ಣವಾಗಿ ಒಕ್ಕೂಟದಿಂದ ಭರಿಸಲಾಗುತ್ತಿದೆ.<br><br>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ವ್ಯಾಪ್ತಿಯಲ್ಲಿ ಇದೂವರೆಗೆ ಈರೋಡ್ ನಿಂದ ಅಂದಾಜು 400 ರಾಸುಗಳನ್ನು ಖರೀದಿಸಲಾಗಿರುತ್ತದೆ. ಒಟ್ಟು ಮೊತ್ತ ರೂ.34,00,000/-ಗಳ ಸಹಾಯಧನವನ್ನು ನೀಡಲಾಗಿರುತ್ತದೆ. |
| ಈ) | ಈರೋಡ್ ಹಸುಗಳನ್ನು ತಂದು ಕರಾವಳಿ ಭಾಗದಲ್ಲಿ ಹೈನುಗಾರಿಕೆ ನಡೆಸಲು ಇಲಾಖೆಯ ಪ್ರೋತ್ಸಾಹ ನೀಡುವುದೇ: ಈರೋಡ್ ತಳಿಗಳನ್ನು ಖರೀದಿ ಮಾಡಲು ಎಷ್ಟು ಸಹಾಯ ನೀಡಲಾಗುವುದು? | ಈರೋಡ್ ಹಸುಗಳನ್ನು ತಂದು ಕರಾವಳಿ ಭಾಗದಲ್ಲಿ ಹೈನುಗಾರಿಕೆ ನಡೆಸಲು ಪ್ರೋತ್ಸಾಹ ನೀಡುವ ಬಗ್ಗೆ ಪಶುಪಾಲನಾ ಇಲಾಖೆಯಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ |

**ಸಂಖ್ಯೆ:ಪಸಂಮೀ 283 ಸಲೆವಿ 2025**

(signature)

**(ಕೆ. ವೆಂಕಟೇಶ್)**

ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು